ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ 24.08.2022

ಸಿ.ಸಿ.ನಂ.1418/2021

| | |
|---|---|
| ಫಿರ್ಯಾದುದಾರರುಃ | ರಾಜ್ಯ ಸರ್ಕಾರದ ಪರವಾಗಿಃ ನಗರ ಠಾಣಾ ಪೊಲೀಸರು, ಚಿಕ್ಕಮಗಳೂರು. |
| | ವಿರುದ್ಧ |
| ಆರೋಪಿಗಳು : | 1. ವಸೀಂ ಎಸ್. @ ಚಿಚ್ಚ<br>ಬಿನ್ ಶಂಶುದ್ದೀನ್ @ ಫೈಂಟರ್ ಶಂಸು,<br>ವಯಸ್ಸುಃ 30 ವರ್ಷ,<br>ಉದ್ಯೋಗಃ ಲಾರಿ ಚಾಲಕ,<br>ವಾಸಃ ಜಾಯ್ ಕಾಫಿ ಕ್ಯೂರಿಂಗ್ ಹತ್ತಿರ,<br>ಹಿರೇಕೊಳಲೆ ರಸ್ತೆ, ಉಪ್ಪಳ್ಳಿ<br>ಚಿಕ್ಕಮಗಳೂರು. |
| | 2. ಇಬ್ಬು ಬಿನ್ ಮಹಮದ್ ರಫೀಕ್,<br>ವಯಸ್ಸುಃ 29 ವರ್ಷ,<br>ಉದ್ಯೋಗಃ ವ್ಯಾಪಾರ ವೃತ್ತಿ,<br>ವಾಸಃ ಗೌರಿಕಾಲುವೆ, ಚಿಕ್ಕಮಗಳೂರು. |

ದೋಷಾರೋಪಣೆ

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ನಂದೀಶ್ ಆರ್.ಪಿ, ಬಿ.ಎ.ಎಲ್. ಎಲ್ಎಲ್.ಎಂ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿಯಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 02.11.2019 ರಂದು ಸಂಜೆ 6-20 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ನಗರ ಠಾಣಾ ವ್ಯಾಪ್ತಿಯ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮುಂಭಾಗದ ರಸ್ತೆಯಲ್ಲಿ 2 ನೇ ಆರೋಪಿತನಾದ ನೀವು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 200 ಗ್ರಾಂ ಒಣಗಿಸಿದ ಕಾಂಡ, ಹೂವು, ಹಣ್ಣು (ಬೀಜ) ಮಿಶ್ರಿತ ಗಾಂಜವನ್ನು ಮಾರಾಟ ಮಾಡುವ ಸಲುವಾಗಿ 1 ನೇ ಆರೋಪಿಯಾದ ನಿನಗೆ ನೀಡಿದ್ದು ಹಾಗೂ 1 ನೇ ಆರೋಪಿಯಾದ ನೀನು 2 ನೇ ಆರೋಪಿಯಾದ ನಿನ್ನಿಂದ ಪಡೆದ ಸದರಿ ಗಾಂಜಾವನ್ನು ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಸಲುವಾಗಿ ಕೆಎ-04-ಎಂಎ-9892 ರ ಮಾರುತಿ ಸುಜುಕಿ ಆಲ್ಟೊ ಕಾರಿನಲ್ಲಿ ಶೇಖರಿಸಿಕೊಂಡಿದ್ದು, ಆ ಕಾರಣ ಆರೋಪಿತರಾದ ನೀವು ಕಲಂ **20(b) (i)** ಎನ್.ಡಿ.ಪಿ.ಎಸ್ (Narcotic Drugs and Psychotropic Substances-1985) ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯ ವ್ಯಾಪ್ತಿಯಲ್ಲಿ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

sd

[ನಂದೀಶ ಆರ್.ಪಿ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.